ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ನವೋದ್ಯಮಿ ಸಂತೆ ನಾಳೆ

ಧಾರವಾಡ: ಇಲ್ಲಿನ ನವೋದ್ಯಮಿ ಸಂಸ್ಥೆಯು ಸಣ್ಣ ಉದ್ಯಮದಾರರಿಗಾಗಿ ವಿಶೇಷ 'ನವೋದ್ಯಮಿ ಸಂತೆ'ಯನ್ನು ಜ. 18ರಿಂದ 20 ರವರೆಗೆ ಗಾಂಧಿನಗರದ ಈಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ. ಸಾವಯವ ಪದಾರ್ಥಗಳು, ವಿವಿಧ ಬಗೆಯ ತಿಂಡಿಗಳು, ಸಿರಿಧಾನ್ಯಗಳು, ಕೈಮಗ್ಗದ ಸೀರೆ, ಉಡುಪು, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಹೊಸದಾಗಿ ಉದ್ಯಮ ಆರಂಭ ಮಾಡುವವರು ಹಾಗೂ ಇರುವ ಉದ್ಯಮವನ್ನು ಸುಧಾರಿಸಿಕೊಳ್ಳುವ ಆಸಕ್ತಿ ಉಳ್ಳವರು ಉಚಿತ ಮಾಹಿತಿ ಪಡೆಯಬಹುದು. ಮಾಹಿತಿಗೆ ಪ್ರವೀಣಕುಮಾರ ನಿಲಾನಿಮಠ, ಮೊ: 9980733192 ಸಂಪರ್ಕಿಸಲು ಪ್ರಕಟಣೆ ಕೋರಿದೆ.